# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಬಿ.ಟಿ.ಎಂ.ಲೇಔಟ್ ಉಪ ವಿಭಾಗ,
16ನೇ ಮುಖ್ಯರಸ್ತೆ, ಬಿ.ಟಿ.ಎಂ.1ನೇ ಹಂತ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು-29, ದಿನಾಂಕ : 02-06-2021

## ವಾರ್ಡ್ ಸಮಿತಿ ಸಭೆಯ ಸೂಚನಾ ಪತ್ರ

ವಿಷಯ:- ವಾರ್ಡ್ ಸಮಿತಿ ಸಭೆಯನ್ನು ನಡೆಸುವ ಬಗ್ಗೆ

ಉಲ್ಲೇಖ:1) ಘನ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಡಬ್ಲೂಪಿ 24739/2012, ದಿನಾಂಕ: 10.11.2017

2) ಕೇಂದ್ರ ಕಛೇರಿ ಆದೇಶ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ: 02.11.2020

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶಗಳಂತೆ ಪ್ರತಿ ಮಾಹೆಯ 1ನೇ ಮತ್ತು 3ನೇ ಶನಿವಾರ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಬೇಕಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಕ್ಷಿಣವಲಯದ ವಾರ್ಡ್ ಸಂಖ್ಯೆ:146 ಲಕ್ಕಸಂದ್ರ 16ನೇ ಅಡ್ಡರಸ್ತೆ ಸಹಾಯಕ ಅಭಿಯಂತರರ ರವರ ಕಛೇರಿ ಬೆಂಗಳೂರು – 560030 ಇಲ್ಲಿ ಸಭೆಯನ್ನು ದಿನಾಂಕ: 05.06.2021 ರ ಬೆಳಿಗ್ಗೆ 10:30 ಗಂಟೆಗೆ ನಿಗಧಿಪಡಿಸಲಾಗಿದ್ದು, ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾಡ್ ಸಂಖ್ಯೆ 146 ಲಕ್ಕಸಂದ್ರಕ್ಕೆ ಸಂಬಂಧಿಸಿದ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಲು ಈ ಮೂಲಕ ಕೋರುತ್ತೇನೆ.

:ಸಭಾ ಅಜೆಂಡಾ:

| | |
|---|---|
| 1) | ಹಿಂದಿನ ಸಭೆಯ ನಡುವಳಿಗಳನ್ನು ಓದಿ ರೆಕಾರ್ಡ್ ಮಾಡುವುದು |
| 2) | ವಾರ್ಡ್ ಸಮಿತಿಯನ್ನು ರಚಿಸುವ ಬಗ್ಗೆ |
| 3) | ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ |
| 4) | ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ |
| 5) | ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳ ಬಗ್ಗೆ ಚರ್ಚೆ |

02/06/2021
ಕಾರ್ಯದರ್ಶಿಗಳು,
ವಾರ್ಡ್ ಸಂಖ್ಯೆ:146, ಲಕ್ಕಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ರವರಿಗೆ :-

1) ಸಹಾಯಕ ಕಾರ್ಯಪಾಲಕ ಅಭಿಯಂತರರು(ಬಿಟಿಎಂ)ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
2) ಸಹಾಯಕ ಕಾರ್ಯಪಾಲಕ ಅಭಿಯಂತರರು(ಘ.ತ್ಯಾ.ನಿ.ಅ.ಬಿಟಿಎಂ)ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ ವಿಭಾಗ ಎಸ್-14 ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು ಉಪ ವಿಭಾಗ ಬೆಂಗಳೂರು ನೀರುಸರಬರಾಜು ಮಂಡಳಿ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
5) ತೋಟಗಾರಿಕೆ ಅಧೀಕ್ಷಕರು (ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
6) ಆರೋಗ್ಯ ವೈದ್ಯಾಧಿಕಾರಿಗಳು ಬಿ.ಟಿ.ಎಂ ಲೇಔಟ್ ವಿಭಾಗದವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
7) ಸಹಾಯಕ ಕಂದಾಯ ಅಧಿಕಾರಿಗಳು ಬಿ.ಟಿ.ಎಂ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಉಪವಿಭಾಗ ದಕ್ಷಿಣ ವಲಯ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-172 ಮಡಿವಾಳ ಕಛೇರಿಯಲ್ಲಿ ದಿನಾಂಕ: 05.06.2021 ರಂದು ನಡೆದ ಮೀಟಿಂಗ್ ನಡವಳಿಗಳು.

**ವಿಷಯ :** ಪಾಲಿಕೆ ಎಲ್ಲಾ ವಾರ್ಡ್‌ಗಳಲ್ಲಿ "Ward Decentralized Triage and Emergency Response (DETER) " Committee for Covid-19 Management (WDC) ರಚಿಸುವ ಕುರಿತು.

**ಉಲ್ಲೇಖ :** 1. ವಾಡ್ ಕಮಿಟಿ ನೋಡಲ್ ಅಧಿಕಾರಿಗಳನ್ನು ನೇಮಿಸಿರುವ ಕಛೇರಿ ಆದೇಶದ ಸಂಖ್ಯೆ ಬಿ12(5)ಪಿ.ಆರ್/35/20-21, ದಿನಾಂಕ : 16.04.2021

2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ನಂ.RD 158 TNR 2020, ದಿನಾಂಕ :07-05-2021
3. ಈ ಕಛೇರಿಯ ಸಭಾ ಸೂಚನೆ ಪತ್ರದ ದಿನಾಂಕ :02.06.2021

* * * * *

ಉಲ್ಲೇಖ (1) ರ ಸಭಾ ಸೂಚನಾ ಪತ್ರದ ಅನುಸಾರ ಉಲ್ಲೇಖ (2) ರ ಆದೇಶದ ಅಂಶಗಳನ್ನು ಪರಿಶೀಲಿಸಲು ದಿನಾಂಕ :05-06-2021 ರಂದು ಲಕ್ಕಸಂದ್ರ ವಾರ್ಡ್ ನಂ.146 ರ ಕಾರ್ಯಾಲಯದಲ್ಲಿ ವಾರ್ಡ್ ಕಮಿಡಿ ಸಮಿತಿ ಸಭೆಯನ್ನು ಉಲ್ಲೇಖ ಪತ್ರ (3) ರಂತೆ ಬೆಳಗ್ಗೆ 10 :30 ಗಂಟೆಗೆ ಕರೆಯಲಾಗಿದ್ದು, ಸದರಿ ಸಭೆಯ ನಡವಳಿಗಳು.

ಹಾಜರಿದ್ದವರು :

**ಸಭೆಗೆ ಹಾಜರಿದ್ದ ಅಧಿಕಾರಿ/ಸದಸ್ಯರುಗಳ ವಿವರ**

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಯೋಗೇಶ್.ಕೆ.ಪಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೊಡಲ್ ಅಧಿಕಾರಿಗಳು | 9902083785 |
| 2 | ಶ್ರೀ.ನರೇಶ್‌ಕುಮಾರ್.ಕೆ ಸ.ಇಂ- ವಾರ್ಡ್ 146(ಪ್ರಭಾರ) | 9844407499 |
| 3 | ಶ್ರೀ.ಸಂದೀಪ್ ಕೆಲಸ ಪರಿವೀಕ್ಷಕರು ಬಿ.ಬಿ.ಎಂ.ಪಿ | 9513342625 |
| 4 | ಶ್ರೀಮತಿ ರೂಪ ಹಿರಿಯ ಆರೋಗ್ಯ ಪರಿವೀಕ್ಷಕರು | 9591399429 |
| 5 | ಶ್ರೀ.ಹೇಮಂತಕುಮಾರ್ ಮಾರ್ಷಲ್ | 9900845779 |
| 6 | ಶ್ರೀ. ವಿಜಯ್ ಕಿರಿಯ ಆರೋಗ್ಯ ಪರಿವೀಕ್ಷಕರು | 9738721476 |

ಶ್ರೀ.ನರೇಶ್‌ಕುಮಾರ್.ಕೆ, ಸದಸ್ಯರು ಕಾರ್ಯದರ್ಶಿಗಳು ಕಮಿಟಿ ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

ಶ್ರೀ.ಯೋಗೇಶ್ ಕೆ.ಪಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ವಾಡ್ ಸಂ.146 ರ ವಾರ್ಡ್ ಕಮಿಟಿ ರವರು ಮಾತನಾಡುತ್ತಾ, ಉಲ್ಲೇಖ (2) ರ ಆದೇಶವನ್ನು ವಿವರಿಸುತ್ತಾ ವಾರ್ಡ್ ನಂ.146 ರಲ್ಲಿ "Ward Decentralized Triage and Emergency Response (DETER) " Committee for Covid-19 Management (WDC) ಯ ಸಮಿತಿ ರಚನೆ "ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ WDC (ವಾರ್ಡ್ ತಡೆ ಸಮಿತಿ) ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರ"ದ ರಚನೆ, ಸ್ವರೂಪ, ಕಾರ್ಯವಿಧಾನ, ಅಗತ್ಯತೆ ಹಾಗೂ ಕೋವಿಡ್-19 ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

1. ಹಿಂದಿನ ಸಭೆಗಳಲ್ಲಿ ನಿರ್ಣಯಗಳ ಅನುಪಾಲನೆ ಹಾಗೂ ಸಾರ್ವಜನಿಕರಿಗೆ ಸಮರ್ಪಕ ಸೇವೆ ನೀಡುವ ಬಗ್ಗೆ ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳಿಗೆ ಅನುಪಾಲನೆ ಮತ್ತು ವಾರ್ಡ್‌ನಲ್ಲಿ ಸಾರ್ವಜನಿಕರ ದಿನನಿತ್ಯ ಮೂಲಭೂತ ಸೌಕರ್ಯಗಳು ಹಾಗೂ ಸೇವೆ ಒದಗಿಸುವ ಸಂಬಂಧ ನಿರಂತರವಾಗಿ ಕ್ರಮವಹಿಸಲು ಹಾಜರಿದ್ದ ಎಲ್ಲಾ ಬಿಬಿಎಂಪಿ ಅಧಿಕಾರಿ ಸಿಬ್ಬಂದಿಯವರಿಗೆ ತಿಳಿಸಿದರು.
2. ಕೋವಿಡ್-19 ನಿಯಂತ್ರಣ ಸಂಬಂಧ "DETER" ಸಮಿತಿ ರಚನೆ ಹಾಗೂ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ.

Scanned with CamScanner

1. "Physical Triaging" ಹಾಗೂ ವಾರ್ಡ್ ವಾರ್ ರೂಂ ಸ್ಥಾಪನೆಗಾಗಿ ಸೂಕ್ತ ಕಟ್ಟಡ ಸ್ಥಳಾವಕಾಶ ಗುರುತಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಮೈಕ್ರೋ ಬಾಷ್ ಕೋವಿಡ್ ಕೇರ್ ಸೆಂಟರ್ ಆಗಿ ಆಯ್ಕೆಮಾಡಿ ಅಗತ್ಯ ಕೇಂದ್ರ ಸ್ಥಾಪಿಸಲು ಕ್ರಮ ವಹಿಸಲು ನಿರ್ಧರಿಸಲಾಯಿತು.
2. ಅಗತ್ಯವಿರುವ ಬ್ಯಾನರ್, ಪೋಸ್ಟರ್, ನಾಮಫಲಕ, ಸೂಚನಾ ಫಲಕ ಹಾಗೂ ಅಗತ್ಯ ಪ್ರಮುಖ ಸಾಮಾಗ್ರಿಗಳನ್ನು ಏರ್ಪಾಡು ಮಾಡಿಕೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು.
3. ವಾರ್ಡ್‌ನ ವಾರ್‌ರೂಂಗೆ ಪ್ರತ್ಯೇಕ ಅಗತ್ಯವಿರುವ ಟೆಲಿಫೋನ್, ಕಾಲ್ ಸೆಂಟರ್ ಸೌಲಭ್ಯ ಒದಗಿಸಲು ಈಗಾಗಲೇ ವಲಯ ಕಛೇರಿಗೆ ಕೋರಲಾಗಿದ್ದು, ದೂರವಾಣಿ ಸಂಖ್ಯೆ ದೊರೆತ ಕೂಡಲೇ ತ್ವರಿತವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.
4. ವಾರ್ಡ್‌ವಾರು ಸ್ವಯಂ ಸೇವಕರನ್ನು ನಿಯಮಾನುಸಾರ ನೋಂದಾಯಿಸಿಕೊಳ್ಳುವುದು, ವಾರ್ಡಿನಲ್ಲಿ, ವೈದ್ಯರು, ಪ್ಯಾರಾಮೆಡಿಕಲ್ ಸಿಬ್ಬಂದಿಯವರನ್ನು ಗುರುತಿಸಿ, ಅಗತ್ಯ ವಿವರ ಸಂಗ್ರಹಣೆ ಹಾಗೂ RWA ಗಳನ್ನು ಸೇರಿಸಿಕೊಂಡು ಸರ್ಕಾರಿ ಆದೇಶದ ಪ್ರಕಾರ ಕಾರ್ಯವಾರು ಗುಂಪು ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.
5. ವಾರ್ಡ್ ಮಟ್ಟದ ಇಲಾಖಾ ಅಧಿಕಾರಿಗಳು ಕೋರ್‌ಗ್ರೂಪ್, NGO ಹಾಗೂ ಸ್ವಯಂ ಸೇವಕರ ಗ್ರೂಪ್ ಮತ್ತು ಆಸ್ಪತ್ರೆ/ಹೋ ಐಸೋಲೇಷನ್ ಗಮನಿಸುವಿಕೆ, ವೈದ್ಯಕೀಯ/BLO ಸಿಬ್ಬಂದಿಗಳ ವಾಟ್ಸ್ ಆಫ್ ಗ್ರೂಪ್‌ಗಳನ್ನು ರಚಿಸಿ ಸಕ್ರಿಯಗೊಳಿಸಿಕೊಳ್ಳಲು ತೀರ್ಮಾನಿಸಲಾಯಿತು.
6. ಬಿಬಿಎಂಪಿ ಕೇಂದ್ರ ಕಛೇರಿಯಿಂದ ನೀಡಲ್ಪಡುವ ಸೂಚನೆಗಳು ಹಾಗೂ ಮಾರ್ಗಸೂಚಿಗಳು, ಸರ್ಕಾರಿ ಆದೇಶಗಳು, ವಲಯ ಕಛೇರಿಯ ಆದೇಶ ಅನುಸಾರ, ಆದ್ಯತೆ ಮೇಲೆ ಕ್ರಮ ವಹಿಸಲು ತೀರ್ಮಾನಿಸಲಾಯಿತು.
7. ಭೌತಿಕ ಸಭೆ ಅಥವಾ ಭೌತಿಕ ಸಂವಹನ ಸಾಧ್ಯವಾಗದಿದ್ದಲ್ಲಿ ವಾಟ್ಸ್ ಆಫ್ ಗ್ರೂಪ್ ಸಂವಹನ, ಇ-ಮೇಲ್, ದೂರವಾಣಿ ಕಾಲ್ ಕಾನ್ಫರೆನ್ಸ್‌ಗಳ ಮೂಲಕ ಸೂಕ್ತವಾಗಿ ಪರಿಣಾಮಕಾರಿಯಾಗಿ ಕ್ರಮವಹಿಸಲು ನಿರ್ಧರಿಸಲಾಯಿತು.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ, ಆದ್ಯತೆ ಮೇಲೆ ಕೈಗೊಂಡು ಮುಂಬರುವ ಸಭೆಯಲ್ಲಿ ಮಂಡಿಸಲು ಸೂಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

5/6/2021
(ನರೇಶ್‌ಕುಮಾರ್.ಕೆ)
ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.146, ಲಕ್ಕಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು:</u>

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ-ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ

Scanned with CamScanner